# ನ.30ರಂದು 'ರೈತತೀರ್ಪು'

ಮೈಸೂರು: ಹೈದಾರಬಾದಿನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ವತಿಯಿಂದ ಬೆಂಗಳೂರಿನಲ್ಲಿ ನ.30ರಿಂದ ಡಿ.4ರವರಗೆ ರೈತ ತೀರ್ಪು ಎನ್ನುವ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ರಾಜ್ಯದ ಹಲವು ಭಾಗದಿಂದ ರೈತರು, ಅಲ್ಲದೆ ದೇಶದ ವಿವಿಧ ಭಾಗದಿಂದಲೂ ಪ್ರಗತಿಪರ ರೈತರು ಆಗಮಿಸಿ ಕೃಷಿ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯ ನಿರ್ದೇಶಕ ಪಿ.ವಿ.ಸತೀಶ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ಸಂಶೋಧನೆಗಳು ಸಾರ್ವಜನಿಕ ಹಿತಾಸಕ್ತಿಯ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿವೆ. ಇದಕ್ಕಾಗಿ ಕೃಷಿ ಸಂಶೋಧನೆಯಲ್ಲಿ ಪ್ರಜಾ ತಾಂತ್ರೀಕರಣ ಸಮನ್ವಯ ತರಲು 'ರೈತ ತೀರ್ಪು' ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಕಾರ್ಯಕ್ರಮದಲ್ಲಿ ರೈತರಿಗಾಗಿ ನಡೆಯುತ್ತಿರುವ ಕೃಷಿ ಸಂಶೋಧನೆಯನ್ನು ವಿಶ್ಲೇಶಿಸಬಹುದು, ಟೀಕಿಸಬಹುದು, ವಿಜ್ಞಾನಿಗಳೊಂದಿಗೆ ಮಾತುಕತೆ ನಡೆ ಬಹುದು, ಕ್ಷೇತ್ರಾಧಾರಿತ, ವಲಯಾಧಾರಿತ ಬೆಳೆಗೆ ಇಂತಹ ಸಂಶೋಧನೆಗಳನ್ನು ಕೈಗೊಳ್ಳಬೇಕು ಎನ್ನುವ ಸಲಹೆಯನ್ನೂ ನೀಡಬಹುದಾಗಿದೆ ಎಂದು ಅವರು ತಿಳಿಸಿದರು.

ರೈತರ ತೀರ್ಪು ಪ್ರಕ್ರಿಯೆ ನ್ಯಾಯ ಸಮ್ಮತವಾಗಿ ನಡೆಯಲು ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ, ಡಾ.ಎಚ್.ಸುದರ್ಶನ್, ಡಾ.ಗೋಪಾಲ್ ಖಾಡೇ ಕುಡಿ, ಡಾ.ದ್ವಾರಕನಾಥ್, ಕೆ.ಆರ್.ವೇಣುಗೋಪಾಲ್ ಹಾಗೂ ದೇವನೂರ ಮಹಾದೇವ ಅವರನ್ನು ಒಳಗೊಂಡ ವೀಕ್ಷಕ ಸಮಿತಿಯನ್ನು ನೇಮಕ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ಸಣ್ಣ – ಅತಿ ಸಣ್ಣ ರೈತರು, ಹಿಂದುಳಿದ, ದಲಿತ ಜನಾಂಗದ ರೈತರು ಹಾಗೂ ಜೀವನಾಧಾರಿತ ಕುಲಕಸುಬಿನ ಜೊತೆ ಕೃಷಿಯನ್ನು ಮಾಡುತ್ತಿ ರುವವರು ಭಾಗವಹಿಸಬಹುದು. ಮಹಿಳೆ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸಬಹುದು. ಆಸಕ್ತರು ಮೈಸೂರಿನ ಗನ್‌ಹೌಸ್ ಎದುರಿನ ನೀಲಕಂಠೇಶ್ವರ ಮಠದಲ್ಲಿ ಇರುವ ರಾಜ್ಯ ಕಬ್ಬು ಬೆಳೆಗಾರರರ ಸಂಘದಲ್ಲಿ ಹೆಸರನ್ನು ನೋಂದಾ ಯಿಸಬಹುದು. ಮಾಹಿತಿಗೆ ದೂ:9448060640 ಸಂಪರ್ಕಿಸಬಹುದು ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಪ್ರಧಾನ ಸಂಚಾಲಕ ಕುರುಬೂರು ಶಾಂತಕುಮಾರ್, ಅತ್ತಹಳ್ಳಿ ದೇವರಾಜು ಹಾಜರಿದ್ದರು.